ಶ್ರೀ ಕೆ.ಎಂ. ಕೃಷ್ಣಮೂರ್ತಿ :— ಏನಾದರೂ ಆ ಕಾರ್ಯಕ್ರಮ ಅನುಷ್ಠಾನ ಮಾಡಿಸಿದರೆ ಚಿಕ್ಕಮಗಳೂರು ಜಿಲ್ಲೆಯ ಅತ್ಯಂತ ದೊಡ್ಡ ಕೆರೆ ಮದಗ ಕೆರೆಯನ್ನು ಮೊದಲಿಗೆ ಭಾರಿ ನೀರಾವರಿ ಇಲಾಖೆಗೆ ಸೇರಿಸಿಕೊಂಡರೆ, ಇವತ್ತೇನು ವಾಣಿವಿಲಾಸ ಸಾಗರಕ್ಕೆ ಮದಗ ಮತ್ತು ಐಲು ಕೆರೆಯಿಂದ ನೀರು ಹೋಗುತ್ತಿದೆ, ಈಗಾಗಲೇ ಮದಗಾ ಮತ್ತು ಐಲು ಕೆರೆಯಿಂದ ನಾಲ್ಕೈದು ಸಾವಿರ ಹೆಕ್ಟೇರ್ ನೀರು ಕೊಡಲಾಗುತ್ತಿದೆ ಅಲ್ಲಿಗೆ ಈ ಹಬ್ಬಿ ಫಾಲ್ಸ್ ನೀರನ್ನೂ ಕೊಟ್ಟರೆ ಕನಿಷ್ಠ 20 ರಿಂದ 25 ಸಾವಿರ ಹೆಕ್ಟೇರ್‌ಗೆ ನೀರು ಸಿಗುತ್ತದೆ. ಇದು ಮುಖ್ಯಮಂತ್ರಿಗಳ ಮತ್ತು ಭಾರೀ ನೀರಾವರಿ ಸಚಿವರ ಗಮನಕ್ಕೆ ತಂದಿದ್ದೇನೆ.

ಶ್ರೀ ಎಚ್.ಕೆ. ಪಾಟೀಲ್ :— ಮದಗದ ಕೆರೆ ನೀರನ್ನು ಹೆಚ್ಚುವರಿಯಾಗಿ ಶೇಖರಿಸಬೇಕೆನ್ನುವುದಕ್ಕೇ ಈ ಅಧ್ಯಯನ ಪ್ರಾರಂಭವಾಗಿರುವುದು. ಮದಗದ ಕೆರೆಗೆ ಹೆಚ್ಚಿನ ನೀರು ಹರಿದುಬರುವ ಹಾಗೆ ಎಲ್ಲಾ ಕಾರ್ಯಕ್ರಮವನ್ನು ಸರ್ಕಾರ ಹಾಕಿಕೊಳ್ಳುವುದು.

ತರೀಕೆರೆ ತಾಲ್ಲೂಕಿನ ಗ್ರಾಮಗಳಿಗೆ ಹಬ್ಬಿ ಫಾಲ್ಸ್‌ನಿಂದ ನೀರು ಒದಗಿಸುವುದು.

258(2616) ಶ್ರೀ ನೀಲಕಂಠಪ್ಪ ಬಿ.ಆರ್. (ತರೀಕೆರೆ) :— ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ತರೀಕೆರೆ ತಾಲ್ಲೂಕಿನ ಅಮೃತಪುರ ಹೋಬಳಿಯ ಕೆಲವು ಗ್ರಾಮಗಳ ಜಮೀನಿಗೆ ಹಬ್ಬಿ ಫಾಲ್ಸ್‌ನಿಂದ ನೀರನ್ನು ಒದಗಿಸುವ ಸಲುವಾಗಿ ಯೋಜನೆಯನ್ನು ಸಿದ್ಧಪಡಿಸಲಾಗಿದೆಯೇ;

ಆ) ಹಾಗಿದ್ದಲ್ಲಿ ಯೋಜನೆಯ ರೂಪುರೇಷೆಗಳೇನು.

ಇ) ಅಂದಾಜು ಮತ್ತು ನಕ್ಷೆಯನ್ನು ಸಿದ್ಧಪಡಿಸಲಾಗಿದೆಯೇ? (ವಿವರ ಒದಗಿಸುವುದು)

ಶ್ರೀ ಎಚ್.ಕೆ. ಪಾಟೀಲ್ (ಜಲಸಂಪನ್ಮೂಲ ಸಚಿವರು) :—

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಇ) ಉದ್ಭವಿಸುವುದಿಲ್ಲ.

ಶ್ರೀ ಎಚ್.ಕೆ. ಪಾಟೀಲ್ (ಜಲಸಂಪನ್ಮೂಲ ಸಚಿವರು) :— ಅಧ್ಯಕ್ಷರೇ ಮಾನ್ಯ ಸದಸ್ಯರಿಗೆ ಉತ್ತರದಲ್ಲಿ ತಿಳಿಸಲಾಗಿದೆ ತರೀಕೆರೆ ತಾಲ್ಲೂಕು ಅಮೃತೂರು ಹೋಬಳಿ ಹಾಗೂ ಕೆಲವು ಗ್ರಾಮಗಳಿಗೆ ಹಬ್ಬಿ ಫಾಲ್ಸ್‌ನಿಂದ ನೀರನ್ನೊದಗಿಸುವ ಸಲುವಾಗಿ ಯೋಜನೆ ಇನ್ನೂ ಸಿದ್ಧವಾಗಿಲ್ಲ, ಆದ್ದರಿಂದ ಇತರೆ ಪ್ರದೇಶಗಳು ಉದ್ಭವಿಸುವುದಿಲ್ಲ.

ಶ್ರೀ ಬಿ.ಆರ್. ನೀಲಕಂಠಪ್ಪ :— ಅಧ್ಯಕ್ಷರೇ ಹಬ್ಬಿ ಫಾಲ್ಸಿಂಬುದು ತರೀಕೆರೆ ತಾಲ್ಲೂಕಿನ ಯೋಜನೆ. ಹಬ್ಬಿ ಫಾಲ್ಸ್‌ನಿಂದ ತರೀಕೆರೆಯ ಅನೇಕ ಕೆರೆಗಳಿಗೆ ನೀರು ಬರುತ್ತಿದೆ. 1967 ರಿಂದಲೂ ಯೋಜನೆಗಳು ಕೆಲ ಕೆಲವು ಮಂತ್ರಿಗಳು ಸರ್ಕಾರಗಳು ಬಂದಾಗ ಯೋಜನೆ ಮಾಡಿವೆ. ಮತ್ತೆ ಕೈಬಿಟ್ಟಿದ್ದಾರೆ. ನೀವು ಹಬ್ಬಿ ಫಾಲ್ಸ್ ಮಾಡದಿದ್ದರೂ ತರೀಕೆರೆ ಕಸಬಾ ಹೋಬಳಿ ಮತ್ತು ಅಮೃತಪುರ ಹೋಬಳಿಗೆ ನೀರು ಬರುತ್ತಿದೆ. ಆಮೇಲೆ ಲಿಂಗದಹಳ್ಳಿಗೆ ಬರುತ್ತಿದೆ. ದೀಪದ ಕೆಳಗೇ ಕತ್ತಲು ಎನ್ನುವಂತೆ ಈ ಯೋಜನೆಯನ್ನು ತಾವೇನಾದರೂ ತರೀಕೆರೆ ತಾಲ್ಲೂಕಿಗೆ ಆಳವಡಿಸದಿದ್ದರೆ ದೊಡ್ಡ ಸಂಘರ್ಷಣೆಗೆ ದಾರಿಮಾಡಿದಂತಾಗುತ್ತದೆ. ಪ್ರಥಮ ಪ್ರಾಶಸ್ತ್ಯ ಕೊಡಬೇಕಾದ್ದು ತರೀಕೆರೆ ತಾಲ್ಲೂಕಿನ ಲಿಂಗದಹಳ್ಳಿ ಹೋಬಳಿ, ಕಸಬಾ ಹೋಬಳಿ ಮತ್ತು ಅಮೃತಪುರ ಹೋಬಳಿಗಳಿಗೆ, ಮದಗದ ಕೆರೆಗೆ ನೀರು ಕೊಡಬೇಡಿ ಎನ್ನುವುದಿಲ್ಲ. 1967ರಿಂದಲೂ ಈ ಬಗ್ಗೆ ಅಲ್ಲಿನ ಜನಪ್ರತಿನಿಧಿಗಳು ಪ್ರತಿ ಸಾರಿಯೂ ಸರ್ಕಾರವನ್ನು ಒತ್ತಾಯಪಡಿಸುತ್ತಲೇ ಬಂದಿದ್ದಾರೆ. ನಮ್ಮ ಕಾನೂನು ಸಚಿವರಿಗೆ ಇದರ ಬಗ್ಗೆ ಸಂಪೂರ್ಣ ಮಾಹಿತಿ ಇದೆ. ತಾವೇನಾದರೂ ಈ ಯೋಜನೆಯಿಂದ ತರೀಕೆರೆ ತಾಲ್ಲೂಕನ್ನು ಬಿಟ್ಟಿದ್ದೇ ಆದರೆ ಮಹಾಶಾಪಕ್ಕೆ ನಮ್ಮ ಸರ್ಕಾರ ಒಳಗಾಗುತ್ತದೆ, ಅದಕ್ಕೆ ಬಿಡುವುದಿಲ್ಲ.

ಇನ್ನೊಂದು, ಈ ಭಾಗದ ಯೋಜನೆಗಳಿಗೆ ದೊಡ್ಡ ಮಾರಕ ಆಗಿರುವುದೇನೆಂದರೆ ಒಂದು ಕಡೆ ಕಾವೇರಿ ಬೇಸಿನ್, ಒಂದು ಕಡೆ ಕೃಷ್ಣಾ ಬೇಸಿನ್- ಗಂಡಹೆಂಡಿರ ಮಧ್ಯೆ ಕೂಸು ಬಡವಾಯಿತು ಎಂಬಂತೆ ಚಿತ್ರದುರ್ಗ, ಚಿಕ್ಕಮಗಳೂರು, ತುಮಕೂರು, ಕೋಲಾರ ಮತ್ತು ದಾವಣಗೆರೆ- ಈ ಐದು ಜಿಲ್ಲೆಗಳು ವಿಶಿಷ್ಟ ರೀತಿಯಲ್ಲಿ ಕಷ್ಟ ಅನುಭವಿಸುತ್ತಿವೆ. ಈಗ ಮಾನ್ಯ ಎಚ್.ಕೆ ಪಾಟೀಲರು ಈ ಜಿಲ್ಲೆಗಳ ಕಡೆ ಭಾರೀ ನಿರ್ಲಕ್ಷ್ಯ ತೋರುತ್ತಿದ್ದಾರೆಂದು ನಮ್ಮ ಭಾಗದ ಜನ ಮಾತನಾಡಿಕೊಳ್ಳುತ್ತಿದ್ದಾರೆ. ಆದಕ್ಕಾಗಿ ದಯಮಾಡಿ ಈ ಸದನದ ಮೂಲಕ ತಮ್ಮಲ್ಲಿ ಮನವಿ ಮಾಡಿಕೊಳ್ಳುವುದಿಷ್ಟೇ: ನೀವು ಕೃಷ್ಣಾ ಬೇಸಿನ್‌ಗೆ ಎಷ್ಟು ಕೊಟ್ಟಿದ್ದೀರಿ? ಕಾವೇರಿ ಬೇಸಿನ್‌ಗೆ ಎಷ್ಟು ಕೊಟ್ಟಿದ್ದೀರಿ? ಈ ಐದು ಜಿಲ್ಲೆಗಳಿಗೆ ಎಷ್ಟು ಕೊಟ್ಟಿದ್ದೀರೆಂಬ ಬಗ್ಗೆ ಒಂದು ಶ್ವೇತಪತ್ರ ಹೊರಡಿಸಿ, ಇದು ನನ್ನ ಆಗ್ರಹ. ಏಕೆಂದರೆ ನೀವು ಈ ಕಡೆ ಬರುವುದಿಲ್ಲ. ಸತತ 20 ವರ್ಷಗಳಿಂದ ನಾವು ಕಣ್ಣೀರಿಡುತ್ತಿದ್ದೇವೆ. ನಮ್ಮ ಭಾಗವನ್ನು ಇನ್ನೂ ಸೇರಿಸಿಲ್ಲ ಎನ್ನುತ್ತೀರಿ. ಇದರ ಬಗ್ಗೆ ಅನೇಕ ಸಲ ಸಭೆ ಕರೆಯಿರಿ ಎಂದರೂ ನೀವು ಕರೆಯುತ್ತಿಲ್ಲ.

ಅಧ್ಯಕ್ಷರು :— ಭಾರೀ ಮಧ್ಯಮ ನೀರಾವರಿ ಮೇಲೆ ಡಿಮ್ಯಾಂಡ್ಸ್ ಬಂದಿದೆ. ಮಧ್ಯಾಹ್ನ ಮಾತನಾಡಿ.

ಶ್ರೀ ಬಿ.ಆರ್. ನೀಲಕಂಠಪ್ಪ :— ನಮ್ಮ ಐದು ಜಿಲ್ಲೆಗಳಿಗೆ ಬಹಳ ಅನ್ಯಾಯವಾಗಿದೆ.

ಅಧ್ಯಕ್ಷರು :— ತಾವು ಕೇಳುವುದು ಸರಿ ಇದೆ. ಯಾವ ಸಂದರ್ಭದಲ್ಲಿ ಕೇಳಬೇಕೋ ಆಗ ಕೇಳಿ. ಪ್ರಶ್ನೋತ್ತರ ವೇಳೆಯಲ್ಲಿ ಅಲ್ಲ. ಮಧ್ಯಾಹ್ನ ಡಿಮ್ಯಾಂಡ್ಸ್ ಇದೆ. ಅದರ ಬಗ್ಗೆ ಮಾತನಾಡಿ.

ಶ್ರೀ ಬಿ.ಆರ್. ನೀಲಕಂಠಪ್ಪ :— ಇದನ್ನು ಅರ್ಧ ಗಂಟೆ ಚರ್ಚೆಗೆ ತೆಗೆದುಕೊಳ್ಳಿ. ಆಗ ನಾನು ಮಾತನಾಡುತ್ತೇನೆ.

ಅಧ್ಯಕ್ಷರು :— ನೀವು ಬರೆದು ಕಳುಹಿಸಿಕೊಡಿ.

ಶ್ರೀ ಹೆಚ್.ಕೆ. ಪಾಟೀಲ್ :— ಮಾನ್ಯ ಅಧ್ಯಕ್ಷರೇ, ಮಾನ್ಯ ನೀಲಕಂಠಪ್ಪನವರು ಕೇಳತಕ್ಕ ಪ್ರಶ್ನೆಗೆ ನಾನು ಇಷ್ಟೇ ಹೇಳಬಹುದು. ಯಾವ ಯೋಜನೆ ಸಿದ್ಧವಾಗಿದೆ ಎಂದು ತಾವು ಕೇಳುತ್ತಿದ್ದೀರಿ, ಆ ಯೋಜನೆ ಯಾವುದೂ ಸಿದ್ಧವಾಗಿಲ್ಲ. ಈಗ ಆ ಯೋಜನೆಯನ್ನು ಸಿದ್ಧಮಾಡುವ ಕೆಲಸ ಪ್ರಾರಂಭವಾಗಿದೆ. ಆದ್ದರಿಂದ ನೀವು ಹೇಳಿದ ಹಾಗೆ ಆ ಊರನ್ನು ಬಿಟ್ಟಿದ್ದೇವೆ, ಈ ಊರನ್ನು ಬಿಟ್ಟಿದ್ದೇವೆ, ಆ ಹೋಬಳಿಯನ್ನು ಬಿಟ್ಟಿದ್ದೇವೆ ಎಂದು ಹೇಳುವುದು ಇದು ಇಮ್ಮಾಜಿನರಿ ಎಂದು ಹೇಳುತ್ತೇನೆ.

ಶ್ರೀ ಬಿ.ಆರ್. ನೀಲಕಂಠಪ್ಪ :— ಉತ್ತರದಲ್ಲಿ ಉದ್ಭವಿಸುವುದಿಲ್ಲವೆಂದು ಹೇಳಿದರೆ ಅನ್ಯಾಯ ಮಾಡಿದಂತಾಗುತ್ತದೆ.

ಶ್ರೀ ಹೆಚ್.ಕೆ. ಪಾಟೀಲ್ :— ಯೋಜನೆಯೇ ಸಿದ್ಧವಾಗಿಲ್ಲ. ಆದ್ದರಿಂದ ಈ ಯೋಜನೆಯೊಳಗೆ ಇವುಗಳನ್ನು ಕೈಬಿಟ್ಟಿದ್ದೀರಿ ಎಂದು ಕೇಳುತ್ತಿದ್ದೀರಿ. ಅದಕ್ಕೆ ಉದ್ಭವಿಸುವುದಿಲ್ಲವೆಂದು ಹೇಳಿದ್ದೇನೆ. ತಾವೇನು ಕೇಳುತ್ತಿದ್ದೀರೋ ಆ ಯೋಜನೆ ಸಿದ್ಧವಾಗಿಲ್ಲ. ಅದು ಒಂದು. ಮಾನ್ಯ ನೀಲಕಂಠಪ್ಪನವರು ಕೆಲವು ಭಾಗದ ಪ್ರದೇಶವನ್ನು ನಿರ್ಲಕ್ಷ್ಯ ಮಾಡಿದ್ದೇವೆ ಎಂದು ಹೇಳಿದ್ದಾರೆ, ಅದು ಸಂಪೂರ್ಣವಾಗಿರುವ ಸುಳ್ಳು. ಕೆಲವರು ರಾಜಕೀಯ ಕಾರಣಕ್ಕಾಗಿ ಮಾಡತಕ್ಕ ದುರುದ್ದೇಶಪೂರಿತವಾಗಿರತಕ್ಕ ಹೇಳಿಕೆಗಳು. ಇನ್ನೊಂದು ಮಾತನ್ನು ತಾವು ಹೇಳಿದಿರಿ. ಉತ್ತರ ಕರ್ನಾಟಕಕ್ಕೆ ತೆಗೆದುಕೊಂಡು ಹೋಗಿದ್ದೀರಿ, ಕಾವೇರಿಗೆ ತೆಗೆದುಕೊಂಡು ಹೋಗಿದ್ದೀರಿ ಎಂದು ನೀವೆಲ್ಲರೂ ಏನು ಬಜೆಟನ್ನು ಪಾಸ್ ಮಾಡಿಕೊಟ್ಟಿರುತ್ತೀರಿ, ಆ ಬಜೆಟ್ ನಲ್ಲಿ ಪಾಸ್ ಮಾಡಿಕೊಟ್ಟಿರುವ ಹಣವನ್ನು ಆ ಒಂದು ಯೋಜನೆಗಳಿಗೆ ವಿನಿಯೋಗ ಮಾಡುತ್ತಿರುತ್ತೇವೆಯೇ ಹೊರತು ಮತ್ತೆ ಬೇರೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಸರಿಯಾಗಿ ನೀವೇನು ಬಜೆಟ್ ಪಾಸು ಮಾಡಿಕೊಟ್ಟಿದ್ದೀರಿ, ಅದರ ಪ್ರಕಾರ ಯೋಜನೆಗಳಿಗೆ ಹಣವನ್ನು ವಿನಿಯೋಗವನ್ನು ಮಾಡುತ್ತಿದ್ದೇವೆ.

ಶ್ರೀ ಬಿ.ಆರ್. ನೀಲಕಂಠಪ್ಪ :— ಮಾನ್ಯ ಅಧ್ಯಕ್ಷರೇ, ನಾವು ಕಾವೇರಿ ಬೇಸಿನ್‌ಗೆ ಹಣವನ್ನು ಕೊಡಬೇಡಿ ಎಂದು ಹೇಳಿಲ್ಲ. ಕೃಷ್ಣ ಬೇಸಿನ್‌ಗೆ ಹಣವನ್ನು ಕೊಡಬೇಡಿ ಎಂದು ಹೇಳಿಲ್ಲ. ನಮ್ಮ ಯೋಜನೆಗಳು ಕುಂಠಿತವಾಗಿವೆ. ಬೇರೆ ಬೇರೆ ಯೋಜನೆಗಳೆಲ್ಲಾ ಕುಂಠಿತವಾಗಿವೆ. ಈ ಭಾಗದ ಐದು ಜಿಲ್ಲೆಯ ಯೋಜನೆಗಳೂ ಕುಂಠಿತವಾಗಿದೆ. ಈ ಕಡೆ ಐದೂ ಜಿಲ್ಲೆಯ ನಾಯಕರುಗಳು ಒತ್ತಡವನ್ನು ತರಲಿಕ್ಕಾಗಲಿಲ್ಲ. ಮುಖ್ಯಮಂತ್ರಿಗಳೂ ಬಹಳ ಜನರಾದರು. ಈ ಕಡೆ ಮುಖ್ಯಮಂತ್ರಿಗಳ ಪ್ರಭಾವದಿಂದಲೂ ಆ ರೀತಿ

ಆಗಿದೆ. ಈ ಭಾಗದ ಬಗ್ಗೆ ತಾವು ಒಂದು ಶ್ವೇತಪತ್ರವನ್ನು ಹೊರಡಿಸಬೇಕು. ಇದು ನಮ್ಮ ಅಳಿವು ಉಳಿವಿನ ಪ್ರಶ್ನೆಯಾಗಿದೆ. ಇದನ್ನು ರಾಜಕೀಯಪ್ರೇರಿತವಾಗಿರುವ ಪ್ರಶ್ನೆ ಎಂದು ಹೇಳಬೇಡಿ.

ಶ್ರೀ ಹೆಚ್.ಕೆ. ಪಾಟೀಲ್ :— ತಾವು ಡಿಮ್ಯಾಂಡ್ ಮೇಲೆ ಹಣವನ್ನು ಪಾಸು ಮಾಡಿಕೊಡುತ್ತೀರಲ್ಲಾ, ಅದರಲ್ಲಿ ಯಾವ ಯೋಜನೆಗಳಿಗೆ ಎಷ್ಟೆಷ್ಟು ಎಂದು ಇರುತ್ತದಲ್ಲಾ. ನಾವೇನು ಬಜೆಟ್ ಮಂಡನೆ ಮಾಡಿದ್ದೇವೆ, ಅದರಲ್ಲಿ ಯೋಜನೆಗಳಿಗೆ ಯಾವ ಬೇಸಿನ್‌ಗೆ ಎಷ್ಟು, ಎಲ್ಲಾ ವಿವರವಾಗಿರುವ ಮಾಹಿತಿಯೂ ಇರುತ್ತದೆ. ಅಷ್ಟಾಗಿ ನಿಮಗೇನು ಮಾಹಿತಿ ಬೇಕಾದರೂ ಕೊಡುತ್ತೇವೆ. ವಾಣಿವಿಲಾಸ ಸಾಗರದ ಕೆಪ್ಯಾಸಿಟಿ 30 ಟಿಎಂಸಿ. ಅಲ್ಲಿ ಬರೀ ಮೂರರಿಂದ ನಾಲ್ಕು ಟಿಎಂಸಿ ನೀರು ಸಂಗ್ರಹವಾಗುತ್ತಿತ್ತು. 30 ಟಿಎಂಸಿ ಆ ದೊಡ್ಡ ಜಲಾಶಯವನ್ನು ಅದು ಇಷ್ಟು ವರ್ಷ ಖಾಲಿ ಇತ್ತು. ಅದನ್ನು ವಾಣಿವಿಲಾಸ ಸಾಗರಕ್ಕೆ ನಾವು ಆಗ್‌ಮೆಂಟ್ ಮಾಡಿ ಅಲ್ಲಿ ಎರಡು ಲಕ್ಷ ಎಕರೆ ಭೂಮಿಯನ್ನು ನೀರಾವರಿ ಮಾಡುವುದು ಅನ್ಯಾಯವೇನು? ಈಗ ನಾವೇನು ಮಧ್ಯ ಕರ್ನಾಟಕವೆಂದು ಕರೆಯುತ್ತೇವೆ, ಎಲ್ಲೆಲ್ಲಿ ನೀರಾವರಿ ಮಾಡಬಹುದು, ಇಲ್ಲಿಯವರೆಗೆ ನಮ್ಮ ನೀರಾವರಿ ಇಲಾಖೆಯಲ್ಲಿ ಬರಗಾಲ ಸಂಭವನೆಯ ಪ್ರದೇಶಕ್ಕೆ ನೀರಾವರಿಯನ್ನು ಒಯ್ಯಬೇಕೆಂದು ಇರಲಿಲ್ಲ. ಮಳೆ ನೆರಳಿನ ಪ್ರದೇಶಕ್ಕೆ ನೀರು ತೆಗೆದುಕೊಂಡು ಹೋಗುವುದಕ್ಕೆ ಅವಕಾಶ ಇರಲಿಲ್ಲ. ಸನ್ಮಾನ್ಯ ಕೃಷ್ಣಾರವರು ಮುಖ್ಯಮಂತ್ರಿಗಳಾದ ಮೇಲೆ ಕ್ಯಾಬಿನೆಟ್‌ನಲ್ಲಿ ವಿಶೇಷವಾಗಿರತಕ್ಕ ಇರಿಗೇಷನ್ ಸೆಕ್ಟಾರ್‌ಗೆ ರಿಫಾರಮ್ಸ್‌ಗಳನ್ನು ತಂದು ಡ್ರಾಟ್‌ಫ್ರೋನ್ ಏರಿಯಾಗೆ ನೀರನ್ನು ತೆಗೆದುಕೊಂಡು ಹೋಗಬೇಕೆಂದು ಮಾಡಿದ್ದೇವೆ. ಮಳೆ ಆಧಾರಿತ ಪ್ರದೇಶಕ್ಕೆ ನೀರನ್ನು ತೆಗೆದುಕೊಂಡು ಹೋಗಬೇಕೆಂದು ಮಾಡಿದ್ದೇವೆ. ಈಗ ಬರಗಾಲ ಸಂಭವನೆಯ ಪ್ರದೇಶ ಯಾವುದು? ನಿಮ್ಮ ಮಧ್ಯ ಕರ್ನಾಟಕ ಪ್ರದೇಶ ಅಲ್ಲವೇ? ಈ ಮಧ್ಯ ಕರ್ನಾಟಕಕ್ಕೆ ನೀರು ಕೊಡುವುದಕ್ಕೆ ಒಂದು ತಾತ್ವಿಕವಾಗಿ ನಿರ್ಣಯವನ್ನು ತೆಗೆದುಕೊಂಡಿರುವ ಸರ್ಕಾರ ಯಾವುದಾದರೂ ಇದ್ದರೆ ಅದು ಎಸ್.ಎಂ. ಕೃಷ್ಣರವರ ಸರ್ಕಾರ. ಕೆಲಸ ಪ್ರಾರಂಭವಾಗಿರುವುದು ಈಗ ಎಂದು ತಮ್ಮ ಗಮನಕ್ಕೆ ನಮ್ಮ ನಮ್ರವಾಗಿ ತರುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ :— ಮಾನ್ಯ ಅಧ್ಯಕ್ಷರೇ, ಮಾನ್ಯ ನೀಲಕಂಠಪ್ಪನವರು ಏಕೆ ನೊಂದು ಹೇಳುತ್ತಿದ್ದಾರೆಂದರೆ ನಮ್ಮ ಪರಿಸ್ಥಿತಿ ಆ ಮಟ್ಟಕ್ಕೆ ಇದೆ. ಒಂದು ಕಡೆ ನಮಗೆ ಕೃಷ್ಣಾ ಬೇಸಿನ್, ಇನ್ನೊಂದು ಕಡೆ ಕಾವೇರಿ ಬೇಸಿನ್. ನಮ್ಮ ಜಿಲ್ಲೆಯಲ್ಲಿ ಐದು ನದಿಗಳು ಹುಟ್ಟಿದರೂ ಕೂಡ ಕುಡಿಯುವ ನೀರಿಗೆ ಬೇಸಿಗೆಯಲ್ಲಿ ತೊಂದರೆ ಇದೆ. ಇವತ್ತೇನಾದರೂ ಮಾನ್ಯ ಪಾಟೀಲರು, ಮಾನ್ಯ ಸಭಾನಾಯಕರಾದ ಕೃಷ್ಣಾರವರು ಈ ಒಂದು ಕಾರ್ಯಕ್ರಮವನ್ನು ಜನರಿಗೆ ಯಶಸ್ವಿಯಾಗಿ ಮುಟ್ಟಿಸಿದ್ದೇ ಆದರೆ ನಾವು ಅವರ ಹೆಸರನ್ನೇ ಅದಕ್ಕೆ ಇಡುತ್ತೇನೆ. ಕಡೂರು ತಾಲ್ಲೂಕಿನಲ್ಲಿ ನೀರಾವರಿ ಇರಲಿ, ನಮಗೆ ಕುಡಿಯುವ ನೀರಿನ ಬಗ್ಗೆ ತೊಂದರೆ ಇದೆ. ನಮಗೆ ಇವತ್ತು ಬೋರ್‌ವೆಲ್‌ಗಳಲ್ಲಿ ಕುಡಿಯುವ ನೀರು ಸಿಕ್ಕಿದರೆ ಸಾಕಾಗಿದೆ. ಇವತ್ತೇನು 30 ಟಿಎಂಸಿ ನೀರು ಸಿಗುತ್ತದೆ ಎಂದು ಹೇಳುತ್ತಿದ್ದಾರೆ, ಇದರಿಂದ 50 ಗ್ರಾಮಗಳಿಗೆ ಕುಡಿಯುವ ನೀರಿನ ವ್ಯವಸ್ಥೆಯನ್ನೂ ಕೂಡ ಮಾಡಬಹುದು.

ಅಧ್ಯಕ್ಷರು :— ನಮ್ಮ ಮುಂದೆ ಇನ್ನು ಎಂಟು ಪ್ರಶ್ನೆಗಳಿವೆ. ಇನ್ನು ಇರುವುದು ಹತ್ತು ನಿಮಿಷ. ಸಭೆ 10-40ಕ್ಕೆ ಪ್ರಾರಂಭವಾಗಿದೆ. ಹತ್ತು ನಿಮಿಷದಲ್ಲಿ ಇನ್ನು ಇರುವ ಎಂಟು ಪ್ರಶ್ನೆಗಳನ್ನು ನಾನು ಹೇಗೆ ಮುಗಿಸಲಿ? ಸದಸ್ಯರುಗಳು ತಾವು ಅರ್ಥಮಾಡಿಕೊಳ್ಳಬೇಕು.

ಶ್ರೀ ಹೆಚ್.ಕೆ. ಪಾಟೀಲ್ :— ಮಾನ್ಯ ಅಧ್ಯಕ್ಷರೇ, ಕೃಷ್ಣಮೂರ್ತಿಯವರು ಹೇಳಿದ್ದಕ್ಕೆ ನಾನು ಇಷ್ಟೇ ಪ್ರತಿಕ್ರಿಯಿಸುತ್ತೇನೆ. ಆ ಭಾಗದಲ್ಲಿ ವಿಶೇಷವಾಗಿರತಕ್ಕ ನೀರಾವರಿ ಸಾಮರ್ಥ್ಯವನ್ನು ಹೆಚ್ಚಿಸುವುದಕ್ಕೆ ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತಿದ್ದೇವೆ. ಅವರು ಹೆಸರನ್ನು ಇಡುವುದು ಬೇಡ. ನಾವೇನು ಕಾರ್ಯಕ್ರಮಗಳನ್ನು ಕೈಗೆ ಎತ್ತಿಕೊಳ್ಳುತ್ತಿದ್ದೇವೆ. ಅವುಗಳನ್ನು ನೋಡಿ ಅವುಗಳ ಬಗ್ಗೆ ತಮಗೆ ಮೆಚ್ಚುಗೆಯಾದರೆ ಮೆಚ್ಚಿಕೊಂಡು ಸಹಕರಿಸಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡುತ್ತೇನೆ.

ರಾಜ್ಯ ಸರ್ಕಾರ ಪಡೆದುಕೊಂಡ ವಿವಿಧ ಸಾಲದ ವಿವರ.

259 (2891) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳಿ ಗ್ರಾಮಾಣ) :— ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕಳೆದ ಮೂರು ವರ್ಷಗಳಲ್ಲಿ ರಾಜ್ಯ ಸರ್ಕಾರ ಪಡೆದುಕೊಂಡಿರುವ ವಿವಿಧ ಆಂತರಿಕ ಸಾಲ ಕೇಂದ್ರದ ಸಾಲ ವಿದೇಶಿ ಸಾಲ ಹಾಗೂ ಇತರ ಸಾಲ 31.3.2001ಕ್ಕೆ ಎಷ್ಟು?

ಆ) ಈ ಎಲ್ಲಾ ಸಾಲಗಳಿಗೆ 2000-2001ರಲ್ಲಿ 31.3.2001ಕ್ಕೆ ಕೊಟ್ಟ ಬಡ್ಡಿ ಎಷ್ಟು ಹಾಗೂ ಕೊಡಬೇಕಾದ ಬಡ್ಡಿ ಬಾಕಿ ಎಷ್ಟು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯ ಮಂತ್ರಿಯವರು) :—

ಅ) ರಾಜ್ಯ ಸರ್ಕಾರವು ವಿದೇಶಿ ಸಾಲಗಳನ್ನು ನೇರವಾಗಿ ಪಡೆಯುವುದಿಲ್ಲ ವಿದೇಶಿ ಸಾಲ ಕೇಂದ್ರ ಸರ್ಕಾರದ ಮುಖಾಂತರ ಬರುತ್ತವೆ. ರಾಜ್ಯ ಸರ್ಕಾರವು ಕಳೆದ ಮೂರು ವರ್ಷಗಳಲ್ಲಿ ಪಡೆದಿರುವ ಸಾಲದ ವಿವರಗಳು ಈ ಕೆಳಕಂಡಂತೆ ಇರುತ್ತವೆ

I) ಆಂತರಿಕ ಸಾಲಗಳು (ರೂ. ಕೋಟಿಗಳಲ್ಲಿ)

	1998--99 ಲೆಕ್ಕ	1999-2000 ಲೆಕ್ಕ	2000-01 ಪರಿಷ್ಕೃತ ಅಂದಾಜು
1) ಮಾರುಕಟ್ಟೆ ಸಾಲ	701-69	903.88	835.58
2) ಎಲ್.ಐ.ಸಿ.	10.00	243.26	105.43